# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** ದಿನಾಂಕ: 08.05.2019

## ನಗರದಲ್ಲಿನ ಮಳೆ ಅನಾಹುತ ಪ್ರದೇಶಗಳಿಗೆ ಭೇಟಿ-ಪರಿಶೀಲನೆ: ಮಹಾಪೌರರು

ಪೂಜ್ಯ ಮಹಾಪೌರರು ಇಂದು ಬೆಳಗ್ಗೆ ನಿನ್ನೆ ನಗರದಲ್ಲಿ ಸುರಿದ ಮಳೆಯಿಂದಾದ ಅನಾಹುತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಗರದಲ್ಲಿ ನಿನ್ನೆ ಮಳೆಗಾಳಿಯಿಂದಾಗಿ ಒಟ್ಟು 63 ಮರಗಳು ಹಾಗೂ 75 ಮರಗಳ ಕೊಂಬೆಗಳು ಉರುಳಿ ಬಿದ್ದಿದ್ದು ಅವುಗಳನ್ನು ತೆರವುಗೊಳಿಸುವ ಕಾರ್ಯವನ್ನು ವಿವಿಧ ತಂಡಗಳನ್ನು ರಚಿಸಿ ಆಮುಖೇನ ಅರಣ್ಯ ಘಟಕವು ಕಾರ್ಯ ತತ್ಪರವಾಗಿ ಇಂದು ಸಂಜೆಯೊಳಗೆ ಪೂರ್ಣಗೊಳಿಸುವಂತೆ ಆದೇಶಿಸಿದರು.

ಮೊದಲಿಗೆ, ನಿನ್ನೆಯ ಮಳೆಯಿಂದಾದ ಅನಾಹುತದಲ್ಲಿ ವಾರ್ಡ್ 76ರ ಗಾಯತ್ರಿನಗರ ವಾರ್ಡ್‌ನ ಶ್ರೀಮತಿ ಪೂಜಾ, 30 ವರ್ಷ, ನಂ.15, 6ನೇ ಕ್ರಾಸ್, 15ನೇ ಮೈನ್ ರೋಡ್ ಗಾಯತ್ರಿನಗರ, ಬೆಂಗಳೂರು-21 ಇಲ್ಲಿ ವಾಸವಾಗಿರುವ ಇವರು ಮಳೆ ನಿಂತ ಮೇಲೆ ವಾಹನ Parking ಮಾಡುವ ವೇಳೆ ಅವರ ಮೇಲೆ ಮರ ಬಿದ್ದು, ತೀವ್ರ ಗಾಯವಾಗಿ ಯಶವಂತಪುರದ ಕೊಲಂಬಿಯಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಬೆಳಗ್ಗೆ ಪೂಜ್ಯ ಮಹಾಪೌರರು ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದಾಗ ಶ್ರೀಮತಿ ಪೂಜಾ ರವರ Back Bone (Spinal) ಗೆ ಪೆಟ್ಟಾಗಿದ್ದು, ಊತ ಕಡಿಮೆ ಆದ ಮೇಲೆ ನಾಳೆ Operation ಮಾಡುವ ಸಾಧ್ಯತೆಯಿದೆ ಎಂದು ವೈದ್ಯರು ತಿಳಿಸಿದ್ದಾರೆ ಎಂದು ಹೇಳಿದರು. ಪೂಜ್ಯ ಮಹಾಪೌರರು ಮಾತನಾಡುತ್ತ, ಸದರಿ ಕುಂಟುಬದವರು ಸಂಕಷ್ಟದಲ್ಲಿರುವುದರಿಂದ ಸದರಿ ಆರೋಗ್ಯ ವೆಚ್ಚವನ್ನು ಪಾಲಿಕೆ ವತಿಯಿಂದ ಭರಿಸುವುದಾಗಿ ತಿಳಿಸಿದರು.

ತದನಂತರ, ತಪಾಸಣೆ ಮುಂದುವರೆಸಿ, ಯಲಹಂಕ ವಲಯ ವ್ಯಾಪ್ತಿಯ ವಾರ್ಡ್-8ರ ಕೋಡಿಗೆಹಳ್ಳಿ ವಾರ್ಡ್‌ನ ಭದ್ರಪ್ಪ ಬಡಾವಣೆಯ ಸ್ಥಳ ಪರಿಶೀಲನೆ ನಡೆಸಿದರು. ಭದ್ರಪ್ಪ ಬಡಾವಣೆಯ ಮುಖ್ಯರಸ್ತೆಯಲ್ಲಿ ಚರಂಡಿ ಕಾಮಗಾರಿ ಕೈಗೆತ್ತಿಗೊಂಡಿದ್ದು, ಇದರಿಂದಾಗಿ ನೀರು ಹರಿಯಲು ಸಾಧ್ಯವಾಗದೆ ರಸ್ತೆ ತುಂಬಾ ನೀರು ತುಂಬಿ ಅನಾನುಕೂಲವಾಗುತ್ತಿರುವುದನ್ನು ಗಮನಿಸಿದ ಪೂಜ್ಯ ಮಹಾಪೌರರು ಈ ಕೂಡಲೇ ಚರಂಡಿ ಕಾಮಗಾರಿಯನ್ನು ದುರಸ್ಥಿಗೊಳಿಸಿ ತಕ್ಷಣ ನೀರು ಹರಿಯಲು ಕ್ರಮಜರುಗಿಸಲು ಹಾಗೂ ರಸ್ತೆ ಬದಿಯಲ್ಲಿರುವ ಮಣ್ಣನ್ನು ತೆರವುಗೊಳಿಸುವಂತೆ ಆದೇಶಿಸಿದರು.

ನಂತರ, ಹೆಬ್ಬಾಳ ವೃತ್ತದಲ್ಲಿ ನೀರು ನಿಂತು ಸಂಚಾರಕ್ಕೆ ಅಡಚಣೆಯಾಗುತ್ತಿರುವುದನ್ನು ಗಮನಿಸಿದ ಮಹಾಪೌರರು ಪದೇ ಪದೇ ಸದರಿ ವೃತ್ತದ ಒಂದು ಭಾಗದಲ್ಲಿ ನೀರು ನಿಂತು ತೊಂದರೆಯಾಗುತ್ತಿರುವುದನ್ನು ತಪ್ಪಿಸಲು ಚರಂಡಿಯ ಹೂಳನ್ನು ತೆಗೆಯುವಂತೆ ಆದೇಶಿಸಿದರು. ನಂತರ ಬಸವೇಶ್ವರ ವೃತ್ತದ (ಚಾಲುಕ್ಯ ವೃತ್ತದ) ಬಳಿ ಆಲದ ಮರದ ಕೊಂಬೆಗಳು ರಸ್ತೆಗೆ ಅಡ್ಡವಾಗಿ ಬಿದ್ದಿರುವುದನ್ನು ತೆರವುಗೊಳಿಸಿರುವ ಕಾರ್ಯವನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಮಾನ್ಯ ಉಪ ಮಹಾಪೌರರು, ಆಡಳಿತ ಪಕ್ಷದ ನಾಯಕರಾದ ಶ್ರೀ.ವಾಜೀದ್ ರವರು ಹಾಗೂ ಅಧಿಕಾರಿಗಳು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**




NO SMOKING

